ವಿಜಯ ಕರ್ನಾಟಕ 26 AUG 2022

ಗುರಿ ಸಾಧಿಸಲು ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವನ್ನು 5 ಪಟ್ಟು ಹೆಚ್ಚಿಸಬೇಕಿದೆ.

# ಭಾರತಕ್ಕೇಕೆ ಸೌರ, ವಾಯುಶಕ್ತಿಯ ಅನಿವಾರ್ಯತೆ?


■ **ಪ್ರೊ.ಬಿ.ಕೆ. ಚಂದ್ರಶೇಖರ್** ಬೆಂಗಳೂರು ಹವಾಮಾನ ಬದಲಾವಣೆ ಅಧ್ಯಯನ ಸಂಸ್ಥೆ (BCCI-K)

■ **ಎಸ್. ಸಿ. ತಿರುಮಲೈ** ವಿಜ್ಞಾನ, ತಂತ್ರಜ್ಞಾನ ಮತ್ತು ಇಂಧನ ನೀತಿ ಕೇಂದ್ರ (CSTEP)


2030ರ ವೇಳೆಗೆ ಭಾರತದ ಹಸಿರು ಪರಿವರ್ತನೆಯ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಸೌರಶಕ್ತಿ ಮತ್ತು ಪವನ ಶಕ್ತಿ, ಎಲೆಕ್ಟ್ರಿಕ್ ವಾಹನಗಳು (ಇವಿಗಳು) ಹಾಗೂ ಹೈಡ್ರೋಜನ್‌ನ್ನು 'ತ್ರಿಮೂರ್ತಿಗಳು' ಎಂದು ಪರಿಗಣಿಸಲಾಗಿದೆ. ಈ ಮಹತ್ವಾಕಾಂಕ್ಷೆಯ ಗುರಿ ಸಾಧನೆಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಅನಿವಾರ್ಯ. 500 ಗಿಗಾ ವ್ಯಾಟ್‌ಗಳಷ್ಟು ಪಳೆಯುಳಿಕೆಯೇತರ (ಪಳೆಯುಳಿಕೆರಹಿತ) ಮೂಲಗಳಿಂದ ವಿದ್ಯುತ್ ಉತ್ಪಾದನೆ, ಶೇ.30 ಎಲೆಕ್ಟ್ರಿಕ್ ವಾಹನಗಳು ಹಾಗೂ ವಾರ್ಷಿಕ ಮಿಲಿಯನ್ ಟನ್‌ಗಳಷ್ಟು ಹೈಡ್ರೋಜನ್ ಉತ್ಪಾದನೆ- ಇದರಲ್ಲಿ ಮುಖ್ಯಾಂಶಗಳಾಗಿವೆ.

ವಿಕ ಪ್ರಸ್ತುತ

2030ರ ವೇಳೆಗೆ ಭಾರತವು ಈ ಗುರಿ ಸಾಧಿಸಲು 6,00,000 ಮೆಗಾವಾಟ್‌ಗಳಷ್ಟು ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯ ಹೊಂದಬೇಕಿದೆ. ಪ್ರಸ್ತುತ, ನಮ್ಮ ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವು 1,11,000 ಮೆಗಾ ವ್ಯಾಟ್‌ಗಳಷ್ಟಿದೆ. ಇದರಲ್ಲಿ 55,000 ಮೆಗಾವಾಟ್‌ಗಳಷ್ಟು ಸೌರಶಕ್ತಿ ಹಾಗೂ 40,000 ಮೆಗಾ ವ್ಯಾಟ್‌ಗಳಷ್ಟು ಪವನಶಕ್ತಿಯಿಂದ ದೊರೆಯುತ್ತಿದೆ. ದೇಶಾದ್ಯಂತ ಸ್ಥಾಪಿಸಿರುವ ನವೀಕರಿಸಬಹುದಾದ ಇಂಧನ ಘಟಕಗಳ ಪೈಕಿ, ರಾಜಸ್ಥಾನ, ಗುಜರಾತ್, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸೇರಿದಂತೆ 6 ರಾಜ್ಯಗಳ ಘಟಕಗಳು ಇಂಧನ ಕ್ಷೇತ್ರಕ್ಕೆ ಶೇ.78ರಷ್ಟು ಕೊಡುಗೆ ನೀಡುತ್ತಿವೆ.

ಇನ್ನೊಂದು ವರ್ಷದಲ್ಲಿ 2,14,000 ಮೆಗಾ ವ್ಯಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಘಟಕಗಳ ಸ್ಥಾಪನೆ ಗುರಿ ಹೊಂದಲಾಗಿದ್ದು, ಸದ್ಯ 86,000 ಮೆಗಾವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಮತ್ತು 17,000 ಮೆಗಾವ್ಯಾಟ್ ಸಾಮರ್ಥ್ಯದ ಪವನಶಕ್ತಿ ಘಟಕಗಳ ಅಳವಡಿಕೆ ಪ್ರಗತಿಯಲ್ಲಿದೆ. ಮುಂದಿನ 7 ವರ್ಷಗಳಲ್ಲಿ 3,80,000 ಸಾಮರ್ಥ್ಯದ ಘಟಕಗಳ ಸ್ಥಾಪನೆ ಗುರಿಯಿದ್ದು, ಇದನ್ನು ಸಾಧಿಸಲು ವಾರ್ಷಿಕ ಕನಿಷ್ಠ 54,000 ಮೆಗಾವ್ಯಾಟ್ ಸಾಮರ್ಥ್ಯದಷ್ಟು ಇದೇ ಮೂಲದ ಇಂಧನ ಘಟಕ ಸ್ಥಾಪಿಸಬೇಕಿದೆ.

ಕಳೆದ 5 ವರ್ಷಗಳಲ್ಲಿ (2017-2022) ಕಲ್ಲಿದ್ದಲು ಘಟಕಗಳು ಸೇರಿದಂತೆ ನಾವು ಸ್ಥಾಪಿಸಿರುವ ವಾರ್ಷಿಕ ಸರಾಸರಿ ವಿದ್ಯುತ್ ಉತ್ಪಾದನಾ ಘಟಕಗಳ ಸಾಮರ್ಥ್ಯ ಕೇವಲ 15,000 ಮೆಗಾವ್ಯಾಟ್ ಅಷ್ಟೇ. ಒಂದು ವೇಳೆ ಕೇವಲ ನವೀಕರಿಸಬಹುದಾದ ಇಂಧನ ಉತ್ಪಾದನಾ ಘಟಕಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ, ನಾವು ಸ್ಥಾಪಿಸಿರುವ ವಿದ್ಯುತ್ ಉತ್ಪಾದನಾ ಘಟಕಗಳ ವಾರ್ಷಿಕ ಸರಾಸರಿ 10,500 ಮೆಗಾ ವ್ಯಾಟ್‌ಗಳಿಗಿಂತಲೂ ಕಡಿಮೆಯಾಗುತ್ತದೆ. ಆದ್ದರಿಂದ, ನಾವು 2030ರ ಗುರಿ ಸಾಧಿಸಲು ಮುಂಬರುವ ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನಾ ಘಟಕಗಳ ಸಾಮರ್ಥ್ಯವನ್ನು ಕನಿಷ್ಠ 5 ಪಟ್ಟು ಹೆಚ್ಚಿಸುವ ಅಗತ್ಯವಿದೆ.

- **ಭಾರತ ಉಷ್ಣವಲಯದ ಭೂಪ್ರದೇಶ.**
- **ಇಲ್ಲಿ ವಾರ್ಷಿಕ 300ಕ್ಕೂ ಹೆಚ್ಚು ಬಿಸಿಲಿನ ದಿನಗಳಿರುತ್ತವೆ.**
- **ಸೌರವಿದ್ಯುತ್ ಉತ್ಪಾದನೆಗೆ ಭಾರತ ಪ್ರಶಸ್ತ.**

ಕೇಂದ್ರ ಸರಕಾರ ಶೇ.50 ವಿದ್ಯುತ್ತನ್ನು ನವೀಕರಿಸಬಹುದಾದ ಮೂಲಗಳಿಂದಲೇ ಉತ್ಪಾದಿಸಲು ಒತ್ತು ನೀಡುವ ಮೂಲಕ ಕೈಗಾರಿಕೆ ಮತ್ತು ವಾಹನಗಳು ಹೊರಬಿಡುವ ಇಂಗಾಲ ಹೊರಸೂಸುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಬದ್ಧತೆ ತೋರಿದೆ. ಇದು ಸ್ವಾಗತಾರ್ಹ. ಮೇಲೆ ಉಲ್ಲೇಖಿಸಿರುವ ತ್ರಿಮೂರ್ತಿ ಯೋಜನೆಗೆ ಸರಕಾರ ಕೊಡುವ ಉತ್ತೇಜನ, ಪ್ರೋತ್ಸಾಹ ಹೊರತಾಗಿಯೂ, ಈ ಯೋಜನೆಗಳ ಅನುಷ್ಠಾನ, ನಾನಾ ಹಂತದ ಸವಾಲು ನಿಭಾಯಿಸಲು ಹೊಸ ನೀತಿ ರೂಪಿಸುವುದು ಅತ್ಯಗತ್ಯ. ಈ ಕೆಳಗಿನ ಅಂಶಗಳು ಸೌರಶಕ್ತಿ ಅಳವಡಿಕೆ ಮತ್ತು ಸಂಭವನೀಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

**ಸೌರ ಶಕ್ತಿಗೆ ಹೆಚ್ಚಿನ ಒತ್ತು:** ಭಾರತವು ಉಷ್ಣವಲಯದಲ್ಲಿದ್ದು ಬೃಹತ್ ಭೂ ಪ್ರದೇಶ ಹೊಂದಿದೆ. ವಾರ್ಷಿಕ 300ಕ್ಕೂ ಹೆಚ್ಚು ಬಿಸಿಲಿನ ದಿನಗಳಿರುತ್ತವೆ. ಭಾರತವು ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಪ್ರಶಸ್ತ ತಾಣ. ಇದರಿಂದ ದೇಶದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನಾ ಯೋಜನೆಗಳು ನಿರ್ದಿಷ್ಟ ರೂಪ ಪಡೆಯಲು ಈಗಾಗಲೇ ಆರಂಭಿಸಿದ್ದು, ಈ ಯೋಜನೆಗಳ ಅನುಷ್ಠಾನಕ್ಕೆ ಮುಂದಿನ ವರ್ಷಗಳಲ್ಲಿ ಭೂಮಿಗೆ ಹೆಚ್ಚಿನ ಬೇಡಿಕೆ ಉಂಟಾಗಲಿದೆ. ಜೊತೆಜೊತೆಗೇ ಭೂಮಿಯ ಆಯ್ಕೆ, ಸ್ವಾಧೀನ ಪ್ರಕ್ರಿಯೆ ಮತ್ತು ಸೌರಫಲಕ ಅಳವಡಿಕೆಯಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮ ಭವಿಷ್ಯದಲ್ಲಿ ಪ್ರಮುಖ ಸವಾಲಾಗಲಿದ್ದು, ಭೂಮಿ ಆಯ್ಕೆಗೆ ಮಾನದಂಡಗಳನ್ನು ಈಗಲೇ ಗುರುತಿಸುವುದು ಸಮಂಜಸ.

2030ರ ವೇಳೆಗೆ ಹೆಚ್ಚುವರಿಯಾಗಿ 3,00,000 ಮೆಗಾ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಘಟಕಗಳನ್ನು ಸ್ಥಾಪಿಸಲು ನಮಗೆ ಇನ್ನೂ 0.5 ಮಿಲಿಯನ್ ಹೆಕ್ಟೇರ್ ಭೂಮಿ ಅಗತ್ಯವಿದೆ. ಇದೇ ವೇಳೆ ವಿದ್ಯುತ್ ಸಂಗ್ರಹಣೆ ಹಾಗೂ ಪ್ರಸರಣ ಮಾರ್ಗಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರತಿ ತಾಲೂಕಿಗೆ 50ರಿಂದ 100 ಮೆಗಾವಾಟ್ ಸೋಲಾರ್ ಘಟಕಗಳನ್ನು ಅಳವಡಿಸಿ, ಅವುಗಳ ಸಾಮರ್ಥ್ಯ ಪರೀಕ್ಷಿಸುವ ಮೂಲಕ 2030ರ ಗುರಿ ಸಾಧನೆಗೆ ಸೂಕ್ತ ಮಾರ್ಗ ಕಂಡುಕೊಳ್ಳಬೇಕಿದೆ.

ದೇಶದಲ್ಲಿ 733 ಜಿಲ್ಲೆಗಳು ಹಾಗೂ 5,650 ತಾಲೂಕುಗಳಿದ್ದು ಪ್ರತಿ ತಾಲೂಕಿನಲ್ಲಿ 200-400 ಎಕರೆ ಭೂಮಿ ಈ ಯೋಜನೆಗೆ ಅಗತ್ಯ. ಹಾಗಾಗಿ, ಯಾವುದೇ ತಾಲೂಕಿನಲ್ಲಿ ಶೇ.50ರಷ್ಟು ಅಗತ್ಯ ಭೂಮಿ, ಸೌರ ಸಂಪನ್ಮೂಲ ಮತ್ತು ವಿದ್ಯುತ್ ಸಾಗಣೆಗೆ ಅಗತ್ಯ ಸೌಲಭ್ಯಗಳಿದ್ದರೆ, ಅಂಥ ತಾಲೂಕುಗಳಲ್ಲಿ 140 ಮೆಗಾವ್ಯಾಟ್‌ನಿಂದ 300 ಮೆಗಾವ್ಯಾಟ್ ಸಾಮರ್ಥ್ಯದವರೆಗೆ ಸೋಲಾರ್ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಏಕೆಂದರೆ, ಸೌರ ಪಾರ್ಕ್‌ಗಳಿಗಾಗಿ ದೊಡ್ಡಪ್ರಮಾಣದ ಭೂ ಸ್ವಾಧೀನ (ಉದಾ: ಪಾವಗಡ ಸೌರ ವಿದ್ಯುತ್ ಸ್ಥಾವರ) ಪ್ರಕ್ರಿಯೆ, ಹೊಸ ವಿದ್ಯುತ್ ಮಾರ್ಗಗಳ ಅಳವಡಿಕೆ ಮತ್ತು ಬಹುದೂರ ವಿದ್ಯುತ್ ಕೊಂಡೊಯ್ಯುವಾಗ



ಆಗುವ ವಿದ್ಯುತ್ ಪ್ರಸರಣ ನಷ್ಟ ತಪ್ಪಿಸಬಹುದು.

ತಂತ್ರಜ್ಞಾನದ ಸುಧಾರಣೆಯಿಂದಾಗಿ ಪ್ರತಿ ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಘಟಕ ನಿರ್ಮಾಣಕ್ಕೆ ಅಗತ್ಯವಿರುವ ಭೂ ಪ್ರದೇಶದ ಮಿತಿಯೂ ಕಡಿಮೆಯಾಗುತ್ತದೆ. ಪ್ರಸ್ತುತ, ಪ್ರತಿ ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ 5 ಎಕರೆಗಳಷ್ಟು ಭೂಮಿ ಅಗತ್ಯವಿದ್ದು, ಮುಂಬರುವ ವರ್ಷಗಳಲ್ಲಿ ಇದರ ಪ್ರಮಾಣ 3 ಎಕರೆಗಳಿಗೆ ಇಳಿಯಲಿದೆ. ಆದಾಗ್ಯೂ, ಭೂಮಿ ಒಂದು ಸೀಮಿತ ಸಂಪನ್ಮೂಲವಾಗಿರುವುದರಿಂದ, ಹೂಡಿಕೆ ಮಾಡುವ ಮೊದಲು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಚಾವಣಿಯ ಸೌರದ್ಯುತಿ ವಿದ್ಯುಜ್ಜನಕ (ಆರ್‌ಟಿಪಿವಿ) ಸಹ ಭೂಮಿ ಲಭ್ಯತೆ ಸಮಸ್ಯೆಗೆ ಮುಖ್ಯ ಪರಿಹಾರ ಒದಗಿಸಲಿದೆ.

**ಚಾವಣಿ ಸೌರದ್ಯುತಿ ವಿದ್ಯುಜ್ಜನಕ:** ನೆಲದ ಮೇಲೆ ಅಳವಡಿಸಲಾಗಿರುವ ಸೌರ ವಿದ್ಯುತ್ ಘಟಕಗಳಿಗೆ ಹೋಲಿಸಿದರೆ, ಸೌರದ್ಯುತಿ ವಿದ್ಯುಜ್ಜನಕ ಅಳವಡಿಕೆ ಪ್ರಗತಿ ಮಂದಗತಿಯಲ್ಲಿದೆ. ಭಾರತಾದ್ಯಂತ ಸ್ಥಾಪಿಸಲಾಗಿರುವ ಸೌರ ವಿದ್ಯುತ್ ಘಟಕಗಳ ಪೈಕಿ ಆರ್‌ಟಿಪಿವಿ ಘಟಕಗಳ ಉತ್ಪಾದನಾ ಸಾಮರ್ಥ್ಯ ಕೇವಲ 7000 ಮೆಗಾವಾಟ್ ಮಾತ್ರ. ಗ್ರಾಹಕರಿಗೆ ಈ ಘಟಕಗಳ ತಂತ್ರಜ್ಞಾನ, ಅವುಗಳ ಕಾರ್ಯಕ್ಷಮತೆ, ಹೂಡಿಕೆಗಳು ಮತ್ತು ಪ್ರಯೋಜನ ಬಗ್ಗೆ ಹೆಚ್ಚು ಅರಿವಿಲ್ಲದಿರುವುದು ಆರ್‌ಟಿಪಿವಿ ಘಟಕಗಳ ನಿಧಾನ ಗತಿಯ ಬೆಳವಣಿಗೆಗೆ ಮುಖ್ಯ ಕಾರಣ.

ಈ ಸಂಗತಿ ಮನೆಗಳ ಮೇಲೆ ಆರ್‌ಟಿಪಿವಿ ಘಟಕ ಅಳವಡಿಸುವ ಯೋಜನೆಗೂ ಹಿನ್ನಡೆಯಾಗಿದೆ. ಅಲ್ಲದೆ, ಹೆಚ್ಚಿನ ಸಾಮರ್ಥ್ಯದ ಘಟಕ (ಕ್ಯಾಪೆಕ್ಸ್) ಅಳವಡಿಸಲು ಅಗತ್ಯವಿರುವ ಸಾಲ ಸೌಲಭ್ಯ ಪಡೆಯಲೂ (ಪ್ರತಿ ಕಿಲೋವಾಟ್‌ಗೆ 50- 70 ಸಾವಿರ ರೂ.) ತೊಂದರೆ ಎದುರಾಗಲಿದೆ. ಕಾರ್ಯವಿಳಂಬ, ಬಿಲ್ಲಿಂಗ್‌ನಲ್ಲಿ ಸಮಸ್ಯೆ ಸೇರಿದಂತೆ ಇತರ ತೊಂದರೆಗಳು ಗ್ರಾಹಕರಿಗೆ ಎದುರಾದರೆ, ಘಟಕ ಸ್ಥಾಪಿಸುವ ಕಂಪನಿಗಳಿಗೆ ಸಬ್ಸಿಡಿ ಮತ್ತು ವಿದ್ಯುತ್ ವಿತರಣಾ ಕಂಪನಿಗಳಿಂದ ಗ್ರಾಹಕರಿಗೆ ಪಾವತಿ ವಿಳಂಬದಂಥ ಸಮಸ್ಯೆಗಳು ಘಟಿಸಲಿವೆ.

ಈ ಸವಾಲುಗಳ ಹೊರತಾಗಿಯೂ, ಆರ್‌ಟಿಪಿವಿ ಘಟಕಗಳು ಭಾರತದ ವಿದ್ಯುತ್ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿವೆ. ಹೆಚ್ಚಿನ ಸಂಖ್ಯೆಯಲ್ಲಿ ಆರ್‌ಟಿವಿಪಿ ಘಟಕ ನಿರ್ಮಿಸುವುದರಿಂದ ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ತಡೆಯಬಹುದಾಗಿದೆ. ಅಲ್ಲದೇ, ಗ್ರಿಡ್‌ಗಳಿಗೆ ಅಗ್ಗದ ಮತ್ತು ಶುದ್ಧ ವಿದ್ಯುತ್ ಪೂರೈಕೆಸಬಹುದಾಗಿದೆ. ಆರ್‌ಟಿವಿಪಿ ವಿನ್ಯಾಸ, ಪ್ಯಾನಲ್ ತಯಾರಿಕೆ, ಪ್ಯಾನಲ್ ಜೋಡಣಾ ಘಟಕಗಳು, ಕಾರ್ಯಾಚರಣೆ, ನಿರ್ವಹಣೆ, ಮಾರಾಟ ಮುಂತಾದ ವಿಭಾಗಗಳ ಮೂಲಕ ಸಾವಿರಾರು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಅಂದಾಜಿನ ಪ್ರಕಾರ, 500 ಮೆಗಾವ್ಯಾಟ್ ಸಾಮರ್ಥ್ಯದ ಆರ್‌ಟಿಪಿವಿ ಘಟಕ ಸ್ಥಾಪನೆಯಿಂದ ಸುಮಾರು 3.4 ಮಿಲಿಯನ್ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ.

ಆರ್‌ಟಿಪಿವಿ ಘಟಕಗಳು ಶುದ್ಧ ಇಂಧನ (ಶಕ್ತಿ) ಉತ್ಪಾದಿಸುವ ಮೂಲಕ ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ ಉತ್ತೇಜನ ನೀಡುತ್ತವೆ. ಮುಖ್ಯವಾಗಿ ಮನೆಗಳಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ಚಾರ್ಜ್ ಮಾಡಲು (ವಿಶೇಷವಾಗಿ ದ್ವಿಚಕ್ರ ವಾಹನಗಳು) ಬಳಸಬಹುದು. ಖಾಲಿಯಾದ ಬ್ಯಾಟರಿಗಳಿಗೆ ರೀಚಾರ್ಜ್ ಮಾಡಲು ಚಾರ್ಜಿಂಗ್ ಸ್ಟೇಷನ್‌ಗಳಲ್ಲಿ ಆರ್‌ಟಿಪಿವಿ ವಿದ್ಯುತ್ ಬಳಸಿಕೊಳ್ಳಬಹುದು. ಇದನ್ನು ಸಾಧಿಸಲು ಕನಿಷ್ಠ 5 ಕಿಲೋವ್ಯಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಬಹುದಾದಂಥ ಸರಕಾರಿ ಕಟ್ಟಡಗಳು, ಕೈಗಾರಿಕಾ ಘಟಕಗಳು, ಆಸ್ಪತ್ರೆಗಳು, ಅಪಾರ್ಟ್‌ಮೆಂಟ್ ಸಂಕೀರ್ಣಗಳು ಹಾಗೂ ಇತರೆ ಬೃಹತ್ ಜಾಗಗಳನ್ನು ಗುರುತಿಸಿ, ಆರ್‌ಟಿಪಿವಿ ಘಟಕಗಳ ಅಳವಡಿಕೆ ಕಡ್ಡಾಯಗೊಳಿಸಬೇಕು. ಇದರ ಜೊತೆಗೆ, ಕಡಿಮೆ ಬಡ್ಡಿದರದ ಸಾಲ ಸೌಲಭ್ಯ, ಸುಲಭಸಾಲ ಸೇರಿದಂತೆ ಇತರೆ ಆರ್ಥಿಕ ನೆರವುಗಳ ಮೂಲಕ ಆರ್‌ಟಿಪಿವಿ ಘಟಕಗಳಿಗೆ ಉತ್ತೇಜನ ನೀಡುವುದು ಅತ್ಯಗತ್ಯವಾಗಿದೆ.